# 1

# ನಾಲ್ಕು ಸುವಾರ್ತೆಗಳ ವರ್ಣನೆ

## ಮತ್ತಾಯ, ಮಾರ್ಕ, ಲೂಕ, ಮತ್ತು ಯೋಹಾನ

ಹೊಸ ಒಡಂಬಡಿಕೆಯಲ್ಲಿನ ನಾಲ್ಕು ಪುಸ್ತಕಗಳ ಅಧ್ಯಯನವನ್ನು ನಾವು ಆರಂಭಿಸುತ್ತಿದ್ದೇವೆ. ಅವುಗಳನ್ನು ಬರೆದವರ ಹೆಸರುಗಳಿಂದ ಅವುಗಳನ್ನು ಗುರುತಿಸುತ್ತೇವೆ:

ಮತ್ತಾಯ - ಸುಂಕ ವಸೂಲಿ ಮಾಡುತ್ತಿದ್ದ ಹಾಗೂ ಯೇಸುವಿನ ಅಪೊಸ್ತಲ.

ಮಾರ್ಕ - ಅಪೋಸ್ತಲರ ಕೃತ್ಯಗಳಲ್ಲಿರುವ ಮಾರ್ಕನೆನಿಸಿಕೊಳ್ಳುವ ಯೋಹಾನನು, ಅಪೊಸ್ತಲ ಯುಗದ ಒಬ್ಬ ಯೌವನಸ್ಥ ಪ್ರಸಂಗಿ.

ಲೂಕ - ವೈದ್ಯನಾದ. ಲೂಕನು ಪೌಲನ ರೋಮಾಪುರ ಹಾಗೂ ಇತರೆ ಸೇವಾ ಪ್ರಯಾಣಗಳಲ್ಲಿ ಸಹಾಯಕನಾಗಿದ್ದನು.

ಯೋಹಾನ - ಬೆಸ್ತ ಹಾಗೂ ಯೇಸುವಿನ "ಪ್ರಿಯ" ಅಪೊಸ್ತಲನು.

ಮುಂದಿನ ಅಭ್ಯಾಸದಲ್ಲಿ ಇವುಗಳನ್ನು ವ್ಯಯಕ್ತಿಕವಾಗಿ ಅಧ್ಯಯನ ಮೊದಲಿರುವದರಿಂದ, ಈಗ ಅವುಗಳನ್ನು ಒಟ್ಟಾರೆ ಅಧ್ಯಯನ ಮಾಡೋಣ.

### ಒಂದೇ ಕಥೆಯ ನಾಲ್ಕು ವಿಚಾರಧಾರೆಗಳು

ಮತ್ತಾಯ, ಮಾರ್ಕ, ಲೂಕ ಹಾಗೂ ಯೋಹಾನ "ನಾಲ್ಕು ಸುವಾರ್ತೆಗಳಾದರೂ" ಅದು ಒಂದೇ ಸುವಾರ್ತೆಯ *ನಾಲ್ಕು ವಿಚಾರಗಳಾಗಿವೆ.*[1]

ಮೊದಲ ಮೂರು ಪುಸ್ತಕಗಳು "ಸೈನೋಪ್‌ಟಿಕ್ಸ್" ಎಂದು ಕರೆಯಲಾಗಿದೆ. ಗ್ರೀಕ್ ಭಾಷೆಯಲ್ಲಿ, "ಒಟ್ಟಾಗಿ" ಅಂದರೆ "ನೋಡು ಅಥವಾ ವೀಕ್ಷಿಸು" ಎಂಬ ಅರ್ಥ. "ಒಟ್ಟಾಗಿ ವೀಕ್ಷಿಸು" ಎಂಬ ಅರ್ಥ. ಯಾಕೆಂದರೆ ಅವುಗಳು ಯೇಸುವಿನ ಒಂದೇ ವಿಚಾರಗಳನ್ನು ತಿಳಿಸುತ್ತವೆ. ಕ್ರಿ.ಶ. 70ರ ಯೆರೂಸಲೇಮಿನ ನಾಶನದ, ಮುಂದೆ ಇವುಗಳನ್ನು ಬರೆದಿರಬಹುದು.

ಯೋಹಾನನ ಸುವಾರ್ತೆಯನ್ನು "ಅಟೋಪ್ಟಿಕ್" "ಸ್ವ-ವೀಕ್ಷಣೆ" ಎಂದಿರಬಹುದು,[2] ಯಾಕೆಂದರೆ, ಇತರೆ ಪುಸ್ತಕಗಳಿಗೆ ಹೋಲಿಸಿದರೆ ವಿಚಾರದಲ್ಲಿ ವಿಭಿನ್ನತೆಯಿದೆ. ಇದನ್ನು ಕ್ರಿ.ಶ. 90 ಅಂದರೆ ಮೊದಲ ಶತಮಾನದ ಅಂತ್ಯದಲ್ಲಿ ಬರೆದಿರಬಹುದು.

### ಏಕೆ ನಾಲ್ಕು ವಿಚಾರಧಾರೆಗಳು?

ಒಂದೇ ಸಮಯದಲ್ಲಿ ಜರುಗಿದ ಘಟನೆಗಳನ್ನು ತಿಳಿಸಲು, ದೇವರು ಏಕೆ ನಾಲ್ಕು ಪುಸ್ತಕಗಳನ್ನು ನೀಡಿದನು? ಗ್ರಂಥಗಳಲ್ಲಿ ನೋಡುವಂತೆ, ಕಾಲಮಾನವನ್ನು ಅಳೆಯುವ ಒಂದಕ್ಕಿಂತ ಅಧಿಕ ಪುಸ್ತಕಗಳನ್ನು ಬರೆಯಲಾಗಿದೆ (1 ಸಮುವೇಲ ಹಾಗೂ 2 ಅರಸುಗಳ ವರೆಗಿನ ಘಟನೆಗಳನ್ನು 1 ಮತ್ತು 2 ಪೂರ್ವಕಾಲವೃತ್ತಾಂತದಲ್ಲಿ ಪುನಃ ತಿಳಿಸಲಾಗಿದೆ), ಆದರೆ ಒಂದೇ ಕಥೆಯ ನಾಲ್ಕು ಪುಸ್ತಕಗಳು ಎಂದರೆ ಅಸಹಜವಾ ಗಿದೆ.

ಸಭೆಯ ಆದಿ ಚರಿತ್ರೆಯಲ್ಲಿ, ಏಕೆ ನಾಲ್ಕು ಪುಸ್ತಕಗಳು ಎಂಬ ಪ್ರಶ್ನೆ ಉಂಟಾಗಿತ್ತು. "ನಾಲ್ಕು" ಎಂಬ ಸಂಖ್ಯೆಯು "ಮನುಷ್ಯನನ್ನು ಸೂಚಿಸುವ" ಸಂಖ್ಯೆಯಾಗಿದೆ. ಈ ಸಂಖ್ಯೆಯನ್ನು ದೇವರು ಏಕೆ ನಿರ್ಧರಿಸಿದನು ಎಂದು ಅರಿಯುವದು ಆದರೆ ಈ ಸಂಖ್ಯೆಯಲ್ಲಿ ಅನೇಕ ವಿಶ್ಲೇಷಣೆಗಳಿವೆ:

(1) ಯೇಸುವಿನ ಚರಿತ್ರೆಗೆ ಇವು ನಾಲ್ಕು *ಮುಖ್ಯ* ಸಾಕ್ಷಿಗಳಾಗಿವೆ.

(2) ಯೇಸುವಿನ ಚರಿತ್ರೆಯನ್ನು ದೃಢೀಕರಿಸುತ್ತವೆ. "ಮೋಶೆಯು ತಿಳಿಸಿದಂತೆ *ಇಬ್ಬರು, ಮೂವರು* ಸಾಕ್ಷಿಗಳಿಂದ ಸಂಗತಿಗಳು ದೃಢಪಡುತ್ತೇವೆ" (ಧರ್ಮೋಪದೇಶಕಾಂಡ 19:15ಬಿ; ಒತ್ತಿ ಹೇಳಿದ್ದು ನನ್ನದು). *ನಾಲ್ಕು* ಸಾಕ್ಷಿಗಳು ಇನ್ನೂ ಉತ್ತಮವೇ.

(3) ಅವು ಯೇಸುವಿನ *ಸರ್ವತೋಮುಖವನ್ನು* ಪ್ರತಿಬಿಂಬಿಸುತ್ತುವೆ. ಒಬ್ಬರು ಈ ವಿಷಯದಲ್ಲಿ:

> ಲಂಡನ್ನಿನ ರಾಷ್ಟ್ರೀಯ ವಸ್ತು ಪ್ರದರ್ಶನದಲ್ಲಿ, ಚಾರ್ಲ್ಸ್ I ನ ಕುರಿತಾದ ಮೂರು ಚಿತ್ರಗಳನ್ನು ಒಂದೇ ಹಾಳೆಯ ಮೇಲೆ ಬಿಂಬಿಸಲಾಗಿದೆ. ಆತನ ಚಿತ್ರಗಳನ್ನು ಒಂದೇ ಹಾಳೆಯ ಮೇಲೆ ಬಿಂಬಿಸಲಾಗಿದೆ. ಆತನ ಒಂದು ಮುಖ ಎಡಕ್ಕು, ಇನ್ನೊಂದು ಚಿತ್ರದ ಮುಖ ಬಲಕ್ಕೂ ತಿರುಗಿರುವಂತೆ ಚಿತ್ರಿಸಿ, ಆತನ ಪೂರ್ಣ ಮುಖದ ಇನ್ನೊಂದು ಚಿತ್ರವನ್ನು ಎದುರಿಗೆ ನೇರವಾಗಿ ನೋಡುವ ಭಂಗಿಯಲ್ಲಿ ಚಿತ್ರಿಸಲಾಗಿದೆ. ವ್ಯಾನ್ ಡಿಕ್ ಎಂಬುವನು ಇದನ್ನು ರೋಮಾಯದ ಶಿಲ್ಪಿಗಾರನಾದ ಬೆರ್ನಿನಿಗಾಗಿ ಚಿತ್ರಿಸಿ, ಅದರಿಂದ ಅರಸನ ಮೆಚ್ಚುಗೆ ಪಡೆಯಲು ಯತ್ನಿಸಿದನು. ಒಂದು ವೇಳೆ ಅವನು ನೇರವಾಗಿ ಮಾತನಾಡುವ ಭಂಗಿಯನ್ನೇ ಚಿತ್ರಿಸಬಹುದಿತ್ತು.
>
> ಹೌದು. ಇಂತಹ ಉದ್ದೇಶವನ್ನು ಈಡೇರಿಸುವ ಸಲುವಾಗಿ ಸುವಾರ್ತೆಗಳನ್ನು ಬರೆಯಲಾಗಿದೆ. ಅದು ನಮ್ಮ ಕರ್ತನ ವಿವಿಧ ಮೂಲೋದ್ದೇಶಗಳನ್ನು ಬಿಂಬಿಸುತ್ತವೆ. ಆತನು ಪರಿಪೂರ್ಣನಾದ ಅರಸನು, ಸೇವಕನು, ಮನುಷ್ಯ ಕುಮಾರನು ಆಗಿದ್ದರೂ ಆತನು ಪರಿಪೂರ್ಣವಾದ ದೇವರ ಮಗನೆಂಬುದನ್ನು ಮರೆಯಬಾರದು.[3]

## ನಾಲ್ಕು ಸುವಾರ್ತೆಗಳ ಹೋಲಿಕೆ

ಈ ನಾಲ್ಕು ಸುವಾರ್ತೆಗಳು ಯೇಸುವನ್ನು ಪ್ರದರ್ಶಿಸುವ ಒಂದೇ ಉದ್ದೇಶವನ್ನು ಹೊಂದಿವೆ - ಆದರೆ ವಿವಿಧ ದೃಷ್ಟಿಕೋನದಿಂದ - ವಿವಿಧ ಗುಂಪಿನವರಿಗಾಗಿ ಬರೆಯ ಲಾಗಿದೆ.[4] ಕೆಳಗಿನ ನಕ್ಷೆಯಲ್ಲಿ ಅವುಗಳನ್ನು ಹೋಲಿಸಿ ಬರೆಯಲಾಗಿದೆ.

ಮತ್ತಾಯನ್ನು, *ಯೆಹೂದ್ಯರಿಗಾಗಿ* ಬರೆದನು. "ದೇವರ ಮಗನು" ಎಂಬಂಥಹ ಹಳೆಯ ಒಡಂಬಡಿಕೆಯ ನೂರಕ್ಕಿಂತಲೂ ಹೆಚ್ಚಾದ ವಾಕ್ಯಗಳನ್ನು ಬರೆದನು (ಮತ್ತಾಯ 1:1). ಯೇಸುವನ್ನು ರಾಜನೆಂದು, ಆತನು ತನ್ನ ರಾಜ್ಯವನ್ನು ಸ್ಥಾಪಿಸಲು ಬಂದವನೆಂದು ಪ್ರತಿಪಾದಿಸಿರುವನು. "ಪರಲೋಕ ರಾಜ್ಯ" ಎಂಬ ಪದವನ್ನು ಐವತ್ತು ಸಾರಿ ಬಳಸಲಾಗಿದೆ. ಯೇಸು ಮೆಸ್ಸೀಯನೆಂದು, ಆತನ ಬೋಧನೆ, ಆತನ ರಾಜ್ಯ, ಆತನ ಅಧಿಕಾರದ ಕುರಿತು ಬರೆದನು.[5]

ಮತ್ತಾಯನಂತೆ, ಮಾರ್ಕನ ಯೆಹೂದ್ಯರಲ್ಲದವರಿಗೆ ಬರೆದನು. ವಂಶಾವಳಿಯ ಬಗ್ಗೆ ಹೆಚ್ಚು ಬರೆಯಲಿಲ್ಲ. ಯೆಹೂದ್ಯ ಸಂಪ್ರದಾಯವನ್ನು ಸರಳವಾಗಿ ಬರೆದನು. ಅವನು *ರೋಮಾಯರಿಗೆ* ಬರೆದನು;[6] ಎಂದು ಕೆಲವು ಬರಹಗಾರರ ಅಭಿಪ್ರಾಯ ಯಾಕೆಂದರೆ ಗ್ರೀಕ್ ಬದಲು ಲ್ಯಾಟೀನ್ ಭಾಷೆಯನ್ನು ಬಳಸಿದನು. ಅಲೆಕ್ಸಾಂಧ್ರಿಯ ಕ್ಲೆಮೆಂಟನ ಪ್ರಕಾರ (ಹೊಲಿಸಿ ಕ್ರಿ.ಶ. 150-215) ಪೇತ್ರನಿಂದ ಅವನು ಕೇಳಿದ ಕ್ರಿಸ್ತನ ಸಂಗತಿಗನ್ನು ದಾಖಲಿಸಬೇಕೆಂದು ರೋಮಾಯ ಕ್ರೈಸ್ತರು ಕೋರಿದ್ದರು.[7] ಯೇಸುವಿನ ಬೋಧನೆಗಿಂತಲೂ, ಆತನ ಕ್ರಿಯೆಗಳ ಕುರಿತಾಗಿ ಅವನು ಹೆಚ್ಚು ಆಸಕ್ತಿ ಹೊಂದಿದನು. ಸಹಾಯ ಮಾಡುವ ಸೇವಕನೆಂದು ಯೇಸುವನ್ನು ಬಿಂಬಿಸಿದನು (ಮಾರ್ಕ 10:45). ಕರ್ತನ ಕರುಣೆಯಲ್ಲಿ, ಪ್ರೀತಿ, ಹಾಗೂ ಔದಾರ್ಯವಿದೆ ಎಂದು ಬರೆದನು.

ಮಾರ್ಕನಂತೆ, ಲೂಕನು ಸಹ ಯೆಹೂದ್ಯರಲ್ಲದವರಿಗಾಗಿ ಬರೆದನು, ಮಾರ್ಕನು ಕ್ರಿಯಾ ಮಗ್ನರಾದ ರೋಮಾಯರಿಗೆ ಬರೆದರೆ, ಲೂಕನು ವಿವೇಕಿಗಳಿಗಾಗಿ ಬರೆದನು. ಅವನು

ಗ್ರೀಕರಿಗೆ ಬರೆದಿರಬಹುದೆಂಬ ಪ್ರತಿತಿ ಇದೆ. ಆತನು ದೇವರ ಮಗನು ಹಾಗೂ ಪರಿಪೂರ್ಣ ಮಾನವೀಯ ಗುಣವುಳ್ಳವನೆಂದು ಬರೆದನು (ಲೂಕ 19:10).

ಇವರೆಲ್ಲರ ಬರವಣಿಗೆಗಳ ಅನೇಕ ದಿವಸಗಳ ನಂತರ ಯೋಹಾನನು ಬರೆದಿರಬಹುದು. ಅದರಲ್ಲಿ ತನ್ನದೇ ಆದ ವಿಶ್ಲೇಷಣೆ ಇದೆ. ಯೇಸುವಿನ ಹೆಸರಿನ ಕುರಿತಾದ ಗೊಂದಲ ಉಂಟಾದ ಸಮಯದಲ್ಲಿ ಆತನು "ದೇವರ ಮಗನೆಂದು" *ನಂಬಲು* ಈ ಸುವಾರ್ತೆಯನ್ನು ಬರೆಯಲಾಗಿದೆ (ಯೋಹಾನ 20:31).

ಸತ್ಯವೇದ ಅಧ್ಯಾಯನದ ವಿಶೇಷಣೆಯನ್ನು ಮತ್ತಾಯನು ಬರೆದಿರುವಲ್ಲಿ, ಮಾರ್ಕನು ವ್ಯವಹಾರ ಮಾಡುವ ಜನರಿಗಾಗಿ, ಲೂಕನು ಪಂಡಿತರು ಮತ್ತು ಮೇದಾವಿಗಳಿಗಾಗಿ, ಸತ್ಯ ಅಪೇಕ್ಷಿಸುವವರಿಗಾಗಿ ಬರೆದಿರುವರು. ಆದರೆ ಯೋಹಾನನು ಸಕಲ ಸಮಯದವರಿಗಾಗಿ, "ಸಾರ್ವತ್ರಿಕ ಸುವಾರ್ತೆಯನ್ನು" ಬರೆದಿರುವನು.

ವಾಗ್ದಾನದ ರಕ್ಷಕನ ಕುರಿತು ಮತ್ತಾಯನು ಬರೆದಿರುವಾಗ, ಮಾರ್ಕನು ಯೇಸುವನ್ನು, "ಶಕ್ತಿಯುತ ರಕ್ಷಕನೆಂದು" ಲೂಕನು, "ಪರಿಪೂರ್ಣ ರಕ್ಷಕನೆಂದು" ಯೋಹಾನನು "ವ್ಯಯಕ್ತಿಕ ರಕ್ಷಕನೆಂದು" ಬರೆದಿರುವರು: ಈ ವ್ಯತ್ಯಾಸಗಳನ್ನು ಅಭ್ಯಾಸಿಸುವಾಗ, ಈ ಪುಸ್ತಕಗಳ *ಕರ್ತನ ರಕ್ಷಣೆಗೆ ಸಕಲರನ್ನು ನಡೆಸುವದೇ ಆ ಉದ್ದೇಶವಾಗಿದೆ*!

## ಈ ನಾಲ್ಕು ಸುವಾರ್ತೆಗಳಲ್ಲಿನ ತಾತ್ಪರ್ಯವೇನು

ಸುವಾರ್ತೆಗಳನ್ನು "ಜೀವನ ಚರಿತ್ರೆ" ಎಂದು ಭಾವಿಸಿದ್ದರೂ, ಇದು ಕೇವಲ ಜೀವನ ಚರಿತ್ರೆಯಲ್ಲಿ "ಚರಿತ್ರೆಯ ಬೋಧನೆ." ಯೇಸುವಿನ ಜೀವಾವಧಿ ಕಾಲದ ಚರಿತ್ರೆಯನ್ನು ಬರೆದಿರುವದಿಲ್ಲ. ಆತನ ಮೂವತ್ತು ವರ್ಷಗಳ ವಿವರಣೆ ಇರುವದಿಲ್ಲ.

(1) ಒಂದರ ಮೂರು ಅಂಶದಲ್ಲಿ ಆತನ ಮರಣವನ್ನೆ ಒತ್ತಿ ಹೇಳಲಾಗಿದೆ. 12ರಿಂದ 30 ವರ್ಷದೊಳಗಿನ ಯಾವುದೇ ಸಂಗತಿಗಳ ಮಾಹಿತಿ ಇರುವದಿಲ್ಲ. ಒಬ್ಬನು ತನ್ನ ಜೀವನ ಚರಿತ್ರೆಯನ್ನು ಬರೆಯುವಾಗ ಹನ್ನೆಡರಿಂದ ಮೂವತ್ತು ವರ್ಷಗಳಲ್ಲಿನ ಸಂಗತಿಗಳನ್ನು ಬರೆಯದೆ ಹೋದರೆ, ನನ್ನ ಹೆಂಡತಿಯನ್ನು ಹೇಗೆ ಸಂಧಿಸಿದೆ, ಹೇಗೆ ನಾನು ಪ್ರಸಂಗಿಯಾದೆ, ನನ್ನ ಕೆಲಸ, ನನ್ನ ಮದುವೆಯ ಅಥವಾ ನನ್ನ ಮಕ್ಕಳ ಜನನ ಇವುಗಳ ಮಾಹಿತಿ ದೊರೆಯುವದೇ ಇಲ್ಲ. ಇದು ಒಂದು ವಿಚಿತ್ರವಾದ ಜೀವನ ಚರಿತ್ರೆಯಾಗುವದಿಲ್ಲವೇ!

(2) ಜನನ, ಬಾಲ್ಯ, ದೀಕ್ಷಾಸ್ನಾನ, ಸೇವೆ, ಮರಣ, ಹಾಗೂ ಪುನರುತ್ಥಾನ ಎಂದು ಕ್ರಮ ಬದ್ಧತೆ ಇದ್ದರೂ, ಬರವಣಿಗೆಕಾರರಿಗೆ, ಕೆಲವು ಬಾರಿ ಕ್ರಮ ಬದ್ಧತೆ ಪ್ರಮುಖವಾಗಿರುವದಿಲ್ಲ. ಕೆಲವು ಸತ್ಯಗಳನ್ನು ಬಹಿರಂಗಗೊಳಿಸುವ ಸಲುವಾಗಿ ಅವುಗಳನ್ನು ಒಂದುಗೂಡಿಸಿರುತ್ತಾರೆ.

(3) ಚರಿತ್ರಕಾರರು ಯೇಸುವಿನ ರೂಪದ ವಿವರಣೆಯನ್ನು ನೀಡಿರುವದಿಲ್ಲ. ಏಕೆ?

ನಾಲ್ಕು ಸುವಾರ್ತೆಗಳು ಕಥಾಸಂಗ್ರಹದಂತಿರುವದರಿಂದ, ಅದನ್ನು ಒಂದುಗೂಡಿಸಿ, ಒಟ್ಟಾರೆಯಾಗಿ ವಿವರಿಸುವದು ಕಷ್ಟಕರವಾಗಿದೆ. ಅದಾಗ್ಯೂ ಈ ಪ್ರಯತ್ನದಲ್ಲಿ ಫಲವಿರಬಹುದು. ಮುಂದೆ ನೀಡಿರುವ ಚಿತ್ರಣದಲ್ಲಿರುವ ಸುವಾರ್ತೆಗಳ ಸಾಮರಸ್ಯದಿಂದ, ಪ್ರತಿಸುವಾರ್ತೆಯಿಂದ ಆಯ್ಕೆಮಾಡಿರುವ ಯೋಚನೆಗಳು ಯೇಸುವಿನ ಜೀವನ ಚರಿತ್ರೆಯ ಒಟ್ಟಾರೆ ಅರ್ಥವನ್ನು ನೀಡುತ್ತದೆ.

ಹೇಗೂ ಒಂದೇ ವಿಚಾರವನ್ನು ಈ ಸುವಾರ್ತೆಗಳು ಮನದಟ್ಟು ಮಾಡುತ್ತವೆ, ಹಾಗೂ ಯೋಹಾನನ ಸುವಾರ್ತೆಯಲ್ಲಿ ಹೆಚ್ಚಿನ ಅಂಶಗಳನ್ನು ತಿಳಿಸಲಾಗಿದೆ. ಅವನು ಮತ್ತಾಯ, ಮಾರ್ಕ, ಹಾಗೂ ಲೂಕನಿಗಿಂತ ವಿಭಿನ್ನವಾದ ಮಾಹಿತಿಯನ್ನು ನೀಡಿರುವನು. ಯೋಹಾನನ ಸುವಾರ್ತೆಯಲ್ಲಿ, ಯೇಸುವಿನ ಜನನ, ದೀಕ್ಷಾಸ್ನಾನ, ಹಾಗೂ ಶೋಧನೆ ಪರ್ವತ ಪ್ರಸಂಗ, ಸಾಮ್ಯಗಳನ್ನು, ಯೇಸು ಬೆಟ್ಟದ ಮೇಲೆ ಪ್ರಕಾಶಗೊಂಡ, ಕರ್ತನ ಭೋಜನದ, ಗೆತ್ಸೇಮನೆಯ

ವೇದನೆಯ ವಿಚಾರಗಳನ್ನು ಹೆಚ್ಚು ತಿಳಿಸಿರುವದಿಲ್ಲ. ಉಳಿದ ಮೂರು ಸುವಾರ್ತೆಗಳಲ್ಲಿ ವಿವರವಾಗಿ ತಿಳಿಸಲಾಗಿದೆ.

ಯೇಸು ಸತ್ತನು, ಹೂಣಲ್ಪಟ್ಟನು, ಎಬ್ಬಿಸಲ್ಪಟ್ಟನು ಎಂಬವುಗಳು ಹೊರತು ಹಲವು ಸಂಘಟನೆಗಳು ಮಾತ್ರ ನಾಲ್ಕು ಸುವಾರ್ತೆಗಳಲ್ಲಿ ದಾಖಲಿಸಲಾಗಿವೆ. ನಾಲ್ಕು ಪುಸ್ತಕಗಳಲ್ಲು ಒಂದು ಘಟನೆಯನ್ನು ಹೇಳುವಾಗ, ಅದು ಗಮನಿಸತಕ್ಕದ್ದಾಗಿದೆ; ಆ ಘಟನೆಗೆ ವಿಶೇಷವಾದ ಪ್ರಾಮುಖ್ಯತೆ ಇದೆ.

## ನಾಲ್ಕು ಸುವಾರ್ತೆಗಳಲ್ಲಿರುವ ವಿಭಿನ್ನತೆಗಳು

ಸುವಾರ್ತೆಗಳಲ್ಲಿನ ಸಾಮರಸ್ಯಗಳನ್ನು ಗಮನಿಸುವಾಗ, ಒಂದೇ ಘಟನಾವಳಿಯಲ್ಲಿ ವಿಭಿನ್ನತೆಯನ್ನು ಕಾಣುತ್ತೇವೆ, ಈ ವಿಭಿನ್ನತೆಗಳನ್ನು ಹೇಗೆ ವಿವರಿಸಬಹುದು?[8]

ಸಾಮಾನ್ಯವಾಗಿ ಒಂದು ಘಟನೆ ಇನ್ನೊಂದಕ್ಕೆ ಸಂಬಂಧಪಟ್ಟಿರುತ್ತದೆ. ಉದಾಹರಣೆಗೆ: ಯೇಸುವಿನ ಅಭಿಷೇಕದ ಕುರಿತು ಗಮನಿಸಿ. ಮತ್ತಾಯನ ಪ್ರಕಾರ (ಮತ್ತಾಯ 26:6-13). ಬೆಥಾನ್ಯದ ಕುಷ್ಟರೋಗಿಯಾದ ಸೀಮೋನನ ಮನೆಯಲ್ಲಿ ಯೇಸು ಇರುವಾಗ ಒಬ್ಬ ಸ್ತ್ರೀ ಬೆಲೆಯುಳ್ಳ ಅಚ್ಚ ಜಟಮಾಂಸ ತೈಲದ ಭರಣಿಯನ್ನು ತಂದು ಯೇಸುವನ್ನು ಅಭಿಷೇಕಿಸಿದಳು, ಆದರೆ ಆತನ ಶಿಷ್ಯರು ಈ ಕಾರ್ಯವನ್ನು ವಿರೋಧಿಸಿದರು ಮಾರ್ಕನ ಪ್ರಕಾರ (ಮಾರ್ಕ 14:3-9). ಇದೇ ವಿಧದಲ್ಲಿದ್ದರೂ, ಕೆಲವು ಬದಲಾವಣೆಗಳಿವೆ: ಅದು ಪರಿಶುದ್ಧವಾದ ಎಣ್ಣೆ, ಸ್ತ್ರೀ ಆ ಭರಣಿಯನ್ನು ಒಡೆದಳು, ಅದು ಮುನ್ನೂರು ಹಣಕ್ಕಿಂತ[9] ಬೆಲೆಯುಳ್ಳದ್ದಾಗಿತ್ತು. ಯೋಹಾನನ ಪ್ರಕಾರ (ಯೋಹಾನ 12:1-8): ಯೇಸು ಮಾರ್ಥಳ ಮನೆಯಲ್ಲಿದ್ದನು. ಅಲ್ಲಿ ಲಾಜರನೂ ಸಹ ಇದ್ದನು, ಮಾರ್ಥಳ ಸಹೋದರಿಯಾದ ಮರಿಯಳು ಆತನನ್ನು ಅಭಿಷೇಕಿಸಿದಳು, ಇಲ್ಲಿ ಯೂದನು ವಿರೋಧ ವ್ಯಕ್ತಪಡಿಸಿದನು. ಇದರಲ್ಲಿ ವಿಭಿನ್ನತೆ ಇಲ್ಲದಿದ್ದರೂ; ಕೆಲವು ಹೊಸ ಸಂಗತಿಗಳಿವೆಯಷ್ಟೆ.

ಸಾಕ್ಷಿಗಳು ಕೆಲವು ಹೊಸ ಸಂಗತಿಗಳನ್ನು ತಿಳಿಸಿದಾಗ, ಅದು ಒಂದು ಸಾಕ್ಷಿಯಾಗಿರದೇ, ಸತ್ಯಾಂಶದ ವಿಚಾರವಾಗಿರುತ್ತದೆ.

> ಡಾಲ್ (ಹೆನ್ರಿ) ವಾನ್ ಡೈಕ್‌ರವರ ಪ್ರಕಾರ, "ಒಬ್ಬ ನ್ಯಾಯಾಧಿಪತಿಯ ಮುಂದೆ, ಒಂದು ವಿಷಯಕ್ಕಾಗಿ, ನಾಲ್ಕು ಸಾಕ್ಷಿಗಳು ಬರುವದಾದರೆ ಅವರೆ ಲ್ಲರು ಈ ವಿಷಯದ ಕುರಿತು ಒಂದೇ ವಿಧವಾದ ವಿವರಣೆಯನ್ನು ನೀಡಬೇಕು. ನ್ಯಾಯಾಧಿಪತಿಯು ಅವರ ಸಾಕ್ಷಿ ಸರಿಯಾದದ್ದೇ ಎಂದು ಹೇಳದಿದ್ದರೂ ಆ 'ಘಟನೆಯು' ಒಂದೇ ಎಂದು ಸಂಶಯ ಪಡದೆ ಇರುವದು ಸತ್ಯವಾಗಿರುತ್ತದೆ. ಅವರು ಆ ಕಥೆಯನ್ನು ಹೇಳುವಲ್ಲಿ ಒಂದೇ ಒಪ್ಪಂದ ಮಾಡಿರುವದು ಸತ್ಯ. ಪ್ರತಿಯೊಬ್ಬನು ತಾನು ಕಂಡ ಸಂಗತಿಯನ್ನು, ಕಂಡಂತೆ ವಿವರಿಸಿದರೆ ಆ ಸಾಕ್ಷಿ ಸತ್ಯವಾದದ್ದೆ. ಸುವಾರ್ತೆಗಳನ್ನು ಓದುವಾಗ, ನಾಲ್ಕು ವ್ಯಕ್ತಿಗಳು ಒಂದೇ ಕಥೆಯನ್ನು ತನ್ನದೇ ದಾಟಿಯಲ್ಲಿ ವಿವರಿಸಿದ್ದಾರೆ."[10]

ಕೆಲವು ಸಂದರ್ಭದಲ್ಲಿ, ವಿವರಣೆಗಳು ಕೇವಲ ಹೆಚ್ಚಿನ ಅಂಶಗಳಾಗಿರದೆ; ವಿಭಿನ್ನವಾಗಿರುತ್ತವೆ. ಘಟನೆಯ ಕ್ರಮ ಒಂದೇ ಆಗಿರದಿದ್ದರೂ, ವ್ಯಕ್ತಿಗಳಲ್ಲಿ ಸಂಖ್ಯೆಗಳಲ್ಲಿ ಬದಲಾವಣೆಗಳಿರಬಹುದು. ಉದಾಹರಣೆಗೆ, ಯೆರಿಕೋ ಬಳಿಯಲ್ಲಿ, ಯೇಸು ಕುರುಡ, ಇಬ್ಬರು ಅಥವಾ (ಹೆಚ್ಚು) ಕುರುಡರನ್ನು ಸ್ವಸ್ಥ ಮಾಡಿದ ಕಾರ್ಯಗಳನ್ನು ಗಮನಿಸಿ. ಮತ್ತಾಯನ ಪ್ರಕಾರ (ಮತ್ತಾಯ 20:29-34), ಯೇಸು ಯೆರಿಕೋವನ್ನು *ದಾಟಿ* ಹೋಗುವಾಗ *ಇಬ್ಬರು* ಕುರುಡರು ಗುಣ ಹೊಂದಿದರು. ಲೂಕನ ಪ್ರಕಾರ (ಲೂಕ 18:35-43), ಯೇಸು ಯೆರಿಕೋ ವನ್ನು ಸಮೀಪಿಸುವಾಗ, ಒಬ್ಬ ಕುರುಡನು ಯೇಸುವನ್ನು ಸಂಧಿಸಿದನು.[11] ಈ ವ್ಯತ್ಯಾಸಗಳನ್ನು ಹೇಗೆ ವಿವರಿಸಬಹುದು? ಇಲ್ಲಿರುವ ಕೆಲವು ಸಾಧ್ಯತೆಗಳನ್ನು ಗಮನಿಸಿ:

(1) ಬರಹಗಾರರು ವಿವರಣೆಗಳನ್ನು ವ್ಯತ್ಯಾಸ ಪಡಿಸಿದ್ದಾರೆ. ಮೇಲಿನ ಉದಾಹರಣೆಯಲ್ಲಿ ಲೂಕನು ಒಬ್ಬನೇ ಕುರುಡನ ಕುರಿತು ಒತ್ತಿ ಹೇಳಿರುವನು, ಅಂದರೆ ಅಲ್ಲಿ ಇಬ್ಬರು ಕುರುಡರು ಗುಣ ಹೊಂದಲಲ್ಲಿ ಎಂಬ ಅರ್ಥವಿರುವದಿಲ್ಲ.

(2) ಬರಹಗಾರರು ಒಂದೇ ವಿಧವಾದ ಘಟನೆಗಳನ್ನು ದಾಖಲಿಸುತ್ತಿರುವಾಗ, F. ಲಗಾರ್ಡ್ ಸ್ಮಿಥ್‌ರವರ ಪ್ರಕಾರ,

> ಒಂದೇ ಘಟನೆಯು, ... ಎರಡು ಸಾರಿ ನೆರವೇರಿದವು ಎಂಬುದು ಕಷ್ಟಕರವಾಗುತ್ತದೆ. ಅಂತಹ ಸಂಗತಿಗಳನ್ನು ವಿವಿಧ ಹಿನ್ನಲೆಯಲ್ಲಿ ವಿವಿಧ ಬರಹಗಾರರು ದಾಖಲು ಮಾಡಿರುತ್ತಾರೆ. ಇದಕ್ಕೆ ಉದಾಹರಣೆಯಗಿ, ದೇವಾಲ ಯದ ಶುದ್ಧತೆ ಹಾಗು ಯೆರೂಸಲೇಮಿನ ಕುರಿತಾದ ದುಃಖವನ್ನು ಗಮನಿಸಿ.[12]

(3) ಆ ಸಂಗತಿಯ ಪರಿಪೂರ್ಣ ವಿಚಾರಗಳನ್ನು ಅರಿಯದೆ ಇರುವಾಗ ವ್ಯತ್ಯಾಸಗಳು ಉದ್ಭವಿಸುತ್ತವೆ. ಮೇಲಿನ ಉದಾಹರಣೆಯ ಪ್ರಕಾರ, ಯೆರಿಕೋವಿನ ಹಳೆಯ ಮತ್ತು ಹೊಸ ಸ್ಥಳ ಎಂದು ನೋಡುತ್ತೇವೆ. ಯೇಸು ಒಂದನ್ನು ಬಿಟ್ಟು, ಇನ್ನೊಂದರ ಬಳಿ ಸಮೀಪಿಸಿದಾಗ ಘಟನೆಗಳು ಸಂಭವಿಸಿರಬಹುದು. ವ್ಯತ್ಯಾಸವಿದೆ ಎಂದು ಹೇಳುವವರು, ಸಂಪೂರ್ಣ ಮಾಹಿತಿಯ ಕೊರತೆಯನ್ನು ಹೊಂದಿರುತ್ತಾರೆ.

(4) ಮೂಲ ಗ್ರಂಥವನ್ನು ಅರಿಯದೆ ಇರುವಾಗ ವ್ಯತ್ಯಾಸವಾಗುತ್ತದೆ. ಹಣಕಾಸಿನ ವಿಚಾರವಾಗಿ, ಹಳೇ ಒಡಂಬಡಿಕೆಯಲ್ಲಿ ದೀರ್ಘಗೊಂದಲ ಉಂಟಾಗಿತ್ತು: ಒಬ್ಬರು ಒಂದು ಕಂತಿನ ಮೊತ್ತವನ್ನು ತಿಳಿಸಿದರೆ, ಇನ್ನೊಬ್ಬರ ಮತ್ತೊಂದು ಮೊತ್ತವನ್ನು ತಿಳಿಸಿದ್ದರು. ನಂತರದಲ್ಲಿ ಪ್ರಾಚೀನ ವಸ್ತು ಸಂಗ್ರಹಕಾರರು, ಎರಡು ವಿಧವಾದ ಅಳತೆಗಳಿರುವದನ್ನು ಕಂಡುಹಿಡಿದರು: ಒಬ್ಬನು ಮೊದಲನೇಯದನ್ನು ಮೊತ್ತಬ್ಬನು ಎರಡನೇಯದನ್ನು ಹೇಳಿರಬಹುದು. ಸಮಯದಿಂದ, ಸಮಯಕ್ಕೆ ಪ್ರಾಚೀನ ಸಂಶೋಧಕರು; ಮೂಲಗ್ರಂಥದ ಬಗ್ಗೆ ಹೊಸ ಬೆಳಕನ್ನು ನೀಡುತ್ತಾರೆ.

ಯೇಸುವಿನ ಜೀವನ ಚರಿತ್ರೆಯ ಕುರಿತು ಹೆಚ್ಚಿನ ಅಧ್ಯಯನದಲ್ಲಿ, "ವ್ಯತ್ಯಾಸಗಳ" ಕುರಿತು ಹೆಚ್ಚಿನ ವಿವರಣೆಯನ್ನು ನೀಡುತ್ತೇನೆ.

## ನಾಲ್ಕರಲ್ಲಿರುವ ಹೋಲಿಕೆಗಳು

ಗ್ರಂಥಗಳು ದೈವ ಪ್ರೇರಿತವಾದವುಗಳು ಎಂದು ನಾನು ನಂಬಿರುವದರಿಂದ (2 ತಿಮೊಥೆ 3:16, 17), ಸುವಾರ್ತೆಗಳಲ್ಲಿ ಕಂಡು ಬರುವ *ವ್ಯತ್ಯಾಸಗಳ* ಕುರಿತು ಚಿಂತನೆ ನಡೆಸುವವನಾಗಿರುತ್ತೇನೆ. ಹಾಗೆಯೇ ಮತ್ತಾಯ, ಮಾರ್ಕ, ಲೂಕ, ಸುವಾರ್ತೆಗಳ ಕುರಿತು ಅನೇಕ ದೈವಶಾಸ್ತ್ರ ಪಂಡಿತರು ಚಿಂತಕರಾಗಿರುತ್ತಾರೆ - ಇವರೆಲ್ಲರೂ ಈ ಮೂರು ಸುವಾರ್ತೆಗಳಲ್ಲಿನ ವ್ಯತ್ಯಾಸಗಳನ್ನು ಗಮನಿಸಿರುತ್ತಾರೆ. ಅದರಲ್ಲಿರುವ ಒಂದೇ ಸಂಗತಿಗಳ ಕುರಿತು ವಿವಿಧ ಚರ್ಚೆಗಳನ್ನು ಮಾಡಿರುತ್ತಾರೆ. ಬರಹಗಾರರು ಏಕೆ ಒಂದೇ ವಿಧವಾದ ಭಾಷೆಯನ್ನು ಬಳಸಿದ್ದಾರೆ: "ಒಬ್ಬ ಬರಹಗಾರನ್ನು ಇನ್ನೊಬ್ಬನು ಹೇಳಿದ ಸಂಗತಿಗಳನ್ನೇ ಹೇಳಿ ರುವನೇ?"; "ಸಾಧಾರಣವಾದ ಮೂಲವನ್ನೇ ಅವರು ಪುನರುಚ್ಚಿಸಿದರೇ?" ಎಂಬುದರ ವಿಚಾರದಲ್ಲಿ ತರ್ಕ ಮಾಡಿದ್ದಾರೆ.

ಈ ಪಂಡಿತರ ವಿಚಾರದಲ್ಲಿ ನಾನು ಅಲ್ಪ ಅನುಕಂಪ ಹೊಂದಿದ್ದೇನೆ. ಒಬ್ಬನೇ ಬರಹಗಾರನಾದ ಪರಿಶುದ್ಧಾತ್ಮನಿಂದಲೇ ಈ ಸಂಗತಿಗಳು ಬರೆಯಲ್ಪಟ್ಟಿರುತ್ತವೆ. ಹಳೇ ಒಡಂಬಡಿಕೆಯಲ್ಲೂ ಸಹ "ಪರಿಶುದ್ಧಾತ್ಮನಿಂದ ನಡೆಸಿಕೊಂಡವರು, ದೇವರ ಮಾತುಗಳನ್ನಾಡಿದರು" (2 ಪೇತ್ರ 1:21). ಆತ್ಮ ಪ್ರೇರಿತವಾದ ಗ್ರಂಥಗಳಲ್ಲಿ[13] ವಿಶ್ವಾಸ ಇಟ್ಟಿರುವರಿಗೆ "ಸೈನೋಪ್ಟಿಕ್ಸ್" ಪುಸ್ತಕಗಳ ಸಮಸ್ಯೆ ಇರುವದಿಲ್ಲ.

## ಈ ನಾಲ್ಕು ಸುವಾರ್ತೆಗಳು ವಿಶ್ವಾಸಕ್ಕೆ ಅರ್ಹವಾಗಿವೆ!

ಮತ್ತಾಯ, ಮಾರ್ಕ, ಲೂಕ, ಹಾಗೂ ಯೋಹಾನನ ಸುವಾರ್ತೆಗಳನ್ನು ದೈವ ಪ್ರೇರಿತವಾದ ಗ್ರಂಥಗಳು ಎಂದು, ಯೇಸುವಿನ ಚರಿತ್ರೆಯು ಸಹ ಪ್ರೇರಿತವಾದದ್ದೆಂದು, ಆದಿ ಸಭೆಗಳವರು ಪರಿಗಣಿಸಿ - ಅವುಗಳನ್ನು ಹೊಸ ಒಡಂಬಡಿಕೆಯಲ್ಲಿ ಅಳವಡಿಕೆ ಮಾಡಲಾಗಿದೆ:

> ಈ ನಾಲ್ಕು ಸುವಾರ್ತೆಗಳಲ್ಲಿ, ಯೇಸುವಿನ ಕುರಿತಾದ ನಿರ್ದಿಷ್ಟವಾದ ದಾಖಲೆಗಳನ್ನು ಮಾಡಲಾಗಿದೆ. ಆದಿಸಭೆಯವರು ಒಪ್ಪಿಕೊಂಡ ಗ್ರಂಥಗಳಾಗಿದ್ದವು. ಇನ್ನು ಇತರೆ ಸುವಾರ್ತೆಗಳಿದ್ದರೂ, ಅವುಗಳನ್ನು ಈ ಸುವಾರ್ತೆಗಳ ಸಂಗತಿಗಳ ದಾಖಲು ಮಾಡಿರುವದಿಲ್ಲ.[14] ಅವುಗಳಲ್ಲಿ ಕೆಲವು ನಂಬಲರ್ಹವಾದ ಅಂಶಗಳಿದ್ದ ಅವುಗಳನ್ನು ಕೆಲವು ಪಂಥಗಳಿಗೆ ಅನುಕೂಲವಾಗುವಂತೆ ಬರೆದಿದ್ದು ಅವುಗಳ ಭಾಷಾ ಶೈಲಿಯು ವಿಭಿನ್ನವಾಗಿರುವದರಿಂದ, ಅವುಗಳನ್ನು ಒಪ್ಪಿಕೊಂಡಿರುವದಿಲ್ಲ ...[15]

ಯೇಸುವಿನ ಜೀವನ ಚರಿತ್ರೆಯ ಅಧ್ಯಯನವನ್ನು ಮಾಡಲು ಆರಂಭಿಸುವಾಗ ಆ ನಾಲ್ಕು ಸುವಾರ್ತೆಗಳನ್ನು ನಾವು ಅವಲಂಭಿಸಬಹುದಾಗಿದೆ.

> ಸೈಮನ್ ಗ್ರೀನ್ ಲೀಫ್ ಎಂಬ ಅಮೇರಿಕೆಯ ಒಬ್ಬ ವಕೀಲನು "ಸಾಕ್ಷಿಯ ನಿಯಮ" ಎಂಬ ಮಹಾ ಬರಹವನ್ನು ಬರೆದನು. ಅವನು ಬರೆದ ಟ್ರೀಟೈಸ್ ಆನ್ ದ ಆಫ್ ಎವಿಡೆನ್ಸ್, ನೂರು ವರ್ಷಗಳ ಕಾಲ ಚಾಲ್ತಿಯಲ್ಲಿತ್ತು. ಹದಿನಾರು ಬಾರಿ ಪುನಃ ಮುದ್ರಿತಗೊಂಡಿತು. ಅವನು 63 ವಯಸ್ಸಿನವನಾಗಿದ್ದು, ಸಾಯುವ 7 ವರ್ಷಗಳ ಹಿಂದೆ ಯೇಸು ಕ್ರಿಸ್ತನ ನಾಲ್ಕು ಸುವಾರ್ತಿಕರ ಸಾಕ್ಷಿಗಳ ಕುರಿತು ಚರ್ಚಿಸಿದನು. ನಾಗರೀಕತೆಯ ಪ್ರಪಂಚದಲ್ಲಿ ಬಳಸಲಾಗುವ ಸಾಕ್ಷಿಯ ನಿಯಮಗಳನ್ನೇ ಅಳವಡಿಸಿದನು. ತಪ್ಪುಗಳನ್ನು ಕಂಡುಹಿಡಿಯುವ ನಿಟ್ಟಿನಲ್ಲಿ, ಅದರಲ್ಲಿರುವ ಅಭಿಪ್ರಾಯಗಳನ್ನು ಸಂಗ್ರಹಿಸುವಲ್ಲಿ, ಅದರಲ್ಲಿ ಅಡಗಿರುವ ತಪ್ಪು ಮತ್ತು ಸತ್ಯಾಂಶಗಳನ್ನು ವಿಂಗಡಿಸಬೇಕು. ಅವನು ಬರೆದ 543 ಪುಟಗಳಲ್ಲಿ, ಸುವಾರ್ತೆಗಳು ಸತ್ಯವಾಗಿದ್ದು, ನಂಬಲರ್ಹವಾಗಿದ್ದು, ಆ ನಾಲ್ಕು ಸುವಾರ್ತಿಕರು ಯೇಸುವಿನ ಕುರಿತು ಯಾವದೇ ಸುಳ್ಳನ್ನು ಹೇಳಿರದೆ, ಅವರ ಸಾಕ್ಷಿಗಳು ದೃಢವಾದ ಸತ್ಯಗಳನ್ನು ಬಿಂಬಿಸುತ್ತವೆ ಎಂದು ನಿರ್ಣಯಗಳನ್ನು ನೀಡಿದ್ದಾರೆ.[16]

ನೀವು ನಂಬಲೇಬೇಕಾದ, ಪ್ರಪಂಚದಲ್ಲಿ ಜೀವಿಸಿದ್ದ ಅದ್ಭುತ ಪುರುಷನ ಚರಿತ್ರೆಯನ್ನು ಮತ್ತಾಯ, ಮಾರ್ಕ, ಲೂಕ, ಯೋಹಾನರು ಬರೆದಿರುವರು, ಅವು ನಿಮ್ಮನ್ನು ನಿತ್ಯತ್ವಕ್ಕೆ ನಡಿಸುತ್ತವೆ. ಪೌಲನು ಇದನ್ನು, "ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು" (1 ತಿಮೋಥೆ 1:15ಎ). ಎಂದು ಬರೆಯುತ್ತಾನೆ.

---

## ಸುವಾರ್ತಿಕರಿಗೆ ಮತ್ತು ಉಪಾಧ್ಯಯರಿಗೆ ಒಂದು ಸೂಚನೆ

"ಸುವಾರ್ತೆಯ ವರ್ಣನೆಯಲ್ಲಿ ವಿವರಿಸಿರುವ ವಿಷಯಗಳು" ಎಂಬ ಎಡಗಡೆಯ ಪಟದಲ್ಲಿ ಇರುವ ಕ್ರಿಸ್ತನ ಜೀವನ ಪ್ರಾಥಮಿಕ ಸಂಕ್ಷಿಪ್ತ ವರ್ಣನೆಯ ವಿವರಗಳ ಬಗ್ಗೆ ಹೆಚ್ಚಾದ ತಿಳುವಳಿಕೆ ನಿಮಗೆ ಇರಬೇಕು, ಕ್ರಿಸ್ತನ ಜೀವನವನ್ನು ಸಂಕ್ಷಿಪ್ತವಾಗಿ ಹಲವು ವಿಧಾನಗಳಲ್ಲಿ ವರ್ಣಿಸಬಹುದು ಆದರೆ ಇದು ಒಂದು ಶ್ರೇಷ್ಟವಾದ ಮತ್ತು ಸುಲಭವಾದದ್ದಾಗಿದೆ. ಈ ಸಂಕ್ಷಿಪ್ತವರ್ಣನೆಯನ್ನು ಒಂದು ರಟ್ಟಿನ ಮೇಲೆ ಅಂಟಿಸಿ ತರಗತಿಯಲ್ಲಿ ತೋರಿಸಬಹುದು. ಈ ಸಂಕ್ಷಿಪ್ತ ವರ್ಣನೆಯನ್ನು ಕಂಠಪಾಠ ಮಾಡಬೇಕೆಂದು ನಿಮ್ಮ ವಿಧ್ಯಾರ್ಥಿಗಳನ್ನು ಪ್ರೋತ್ಸಾಹಿಸಬಹುದು.

ಟಿಪ್ಪಣಿಗಳು

[1]ಎರಡು ಮತ್ತು ಮೂರನೇ ಶತಮಾನದಲ್ಲಿ ಹೊಸ ಒಡಂಬಡಿಕೆಯ ಮೊದಲ ನಾಲ್ಕು ಪುಸ್ತಕಗಳನ್ನು "ಸುವಾರ್ತೆಗಳು" ಎಂದು ಕರೆದರು. [2]ಆಟೋಪ್ಟಿಕ್ ಅಂದರೆ "ಸಾಕ್ಷಿ." [3]Henrietta C. Mears, *What the Bible Is All About* (Glendale, Calif.: Gospel Light Publications, 1966), 348. [4]ನಾನಾ ವಿಧವಾದ ಓದುಗರಿಗೆ ವಿವರಣೆಗಳನ್ನು ತಿಳಿಸುವುದರ ಬಗ್ಗೆ ಒಂದು ಮಾದರಿಯನ್ನು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿರುವ ಪೌಲನ ಪರಿವರ್ತನೆಯ ಬಗ್ಗೆ ಇರುವ ಮೂರು ವರ್ಣನೆಗಳನ್ನು ಕಾಣಬಹುದು: ಅಪೊಸ್ತಲರ ಕೃತ್ಯಗಳು 9 ಲೂಕನು ತನ್ನ ಓದುಗರಿಗೆ ವಿವರಿಸುತ್ತಾನೆ; ಅಪೊಸ್ತಲರ ಕೃತ್ಯಗಳು 22ರಲ್ಲಿ ಯೆರೂಸಲೇಮಿನಲ್ಲಿ ಯೂದರ ಮುಂದೆ ಪೌಲನ ಪ್ರತಿವಾದನೆಯನ್ನು ಕಾಣಬಹುದು; ಅಪೊಸ್ತಲರ ಕೃತ್ಯಗಳು 26ರಲ್ಲಿ ಅರಸನಾಗ ಅಗ್ರಿಪ್ಪನಿಗೆ ಉದ್ದೇಶಿಸಿ ಕೈಸರದಲ್ಲಿ ಹೇಳಿದ ಪೌಲಿನ ಪ್ರಸಂಗದ ಒಂದು ಭಾಗವನ್ನು ಕಾಣಬಹುದು. ಸೈಮನ್ ಕ್ರಿಸ್ಟ್‌ಮೇಕರ್ ಎಂಬಾತನು ಕೊನೆಯ ಎರಡು ವಿವರಗಳ ಬಗ್ಗೆ ಹೀಗೆ ವ್ಯಾಖ್ಯಾನಿಸಿದನು: "ಒಂದೇ ಸಂಘಟನೆಯಿಂದ [ಪೌಲನ ಪರಿವರ್ತನೆಯಿಂದ], ಪೌಲನು ವಿವಿಧವಾದ ಪದಗಳನ್ನು ಉಪಯೋಗಿಸಿ ವಿವಿಧವಾದ ವಿಷಯವನ್ನು ಒಂದೊಂದು ಗುಂಪಿಗೆ ಅನುಕೂಲವಾಗಿ ಸುವಾರ್ತೆಯನ್ನು ಒತ್ತಿ ಹೇಳುವದರಲ್ಲಿ ಪ್ರಾಯಾಸಪಟ್ಟನು ..." (Simon Kistemaker, *New Testament Commentary: Exposition of the Acts of the Apostles* [Grand Rapids, Mich.: Baker Book House, 1990], 899). [5]ಈ ನಾಲ್ಕು ಸುವಾರ್ತೆಗಳ ವರ್ಣನೆಯ ಬಗ್ಗೆ ಹೆಚ್ಚಾದ ವಿವರಗಳನ್ನು ಒಂದೊಂದು ಪುಸ್ತಕದ ಸಂಕ್ಷಿಪ್ತ ವರ್ಣನೆಯಲ್ಲಿ ಈ ಪುಸ್ತಕದಲ್ಲಿ ಕಾಣಬಹುದು. [6]ಈ ಪುಸ್ತಕದಲ್ಲಿರುವ "ಮಾರ್ಕನ ಪುಸ್ತಕ" ಎಂಬ ಪಾಠವನ್ನು ನೋಡಿ. [7]Referred to in John Franklin Carter, *A Layman's Harmony of the Gospels* (Nashville: Broadman Press, 1961), 25. [8]ಅಪೊಸ್ತಲರ ಕೃತ್ಯಗಳು ಎಂಬ ಪುಸ್ತಕದಲ್ಲಿ ಲೂಕನು ಪೌಲನ ಪರಿವರ್ತನೆಯ ಬಗ್ಗೆ ಕೊಟ್ಟಿರುವ ಮೂರು ತರಹದ ವಿವರಣೆಗಳನ್ನು ಮುಂಚಿತವಾಗಿ ತಿಳಿಸಿದ್ದೇನೆ (ಅಪೊಸ್ತಲರ ಕೃತ್ಯಗಳು 9; 22; 26). ಜಾನ್‌ಸ್ಟೌಂಟ್ ಎಂಬಾತನು ಹೀಗೆ ವ್ಯಾಖ್ಯಾನಿಸಿದನು: "ಒಂದೇ ಬರಹಗಾರನು ಒಂದೇ ವಿಷಯವನ್ನು ವಿವಿಧ ರೂಪದಲ್ಲಿ ಹೇಳಿಕೊಂಡನೆಂಬುದರ ಬಗ್ಗೆ ನಮ್ಮ ಅಧ್ಯಯನವು ಸಾರಾಂಶ ಸಂಗ್ರಹ ಸುವಾರ್ತೆಗಳ ಮೂವರು ಬರಹಗಾರರು (ಮತ್ತಾಯ, ಮಾರ್ಕ, ಲೂಕ) ಹೇಗೆ ಒಂದೇ ವಿಷಯನ್ನು ತಮ್ಮ ಓದುಗರರಿಗೆ ನಾನಾ ರೂಪದಲ್ಲಿ ತಿಳಿಸಲು ಸಾಧ್ಯವೆಂಬುದು ಅರ್ಥವಾಗುವದು" (John R. W. Stott, *The Message of Acts: The Spirit, the Church & the World,* The Bible Speaks Today Series, ed. John R. W. Stott [Downers Grove, Ill.: Inter-Varsity Press, 1990], 380). [9]ಹಣಕ್ಕಿಂತ ಎಂಬುದು ದೇನಾರೀಯಸ್ ಎಂಬ ಪದವಾಗಿದೆ, ಇದು ಒಬ್ಬ ಸಾಮಾನ್ಯ ಕೆಲಸಗಾರನ ಒಂದು ದಿನದ ಸಂಬಳವಾಗಿದೆ. "ದೇನಾರೀ" ಎಂಬುದು "ದೇನಾರೀಯಸ್" ಎಂಬುದಕ್ಕೆ ಬಹುವಚನವಾಗಿದೆ. [10]Mears, 345.

[11]ಮಾರ್ಕನ ವರ್ಣನೆಯಲ್ಲಿ (ಮಾರ್ಕನು 10:46-52) ಒಬ್ಬ ಕುರುಡನು (ಬಾರ್ತಿಮಾಯ) ವಾಸಿಯಾಗಿದ್ದನ್ನು ಕಾಣುತ್ತೇವೆ. [12]F. LaGard Smith, *The Narrated Bible in Chronological Order* (Eugene, Oreg.: Harvest House Publishers, 1984), 1351. [13]ಈ ಪಾರಂಪಾರ್ಯದಲ್ಲಿ ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನರನ್ನು ಪರಿಶುದ್ಧಾತ್ಮನು ಬರೆಯಲು ಪ್ರೇರೇಪಿಸಿದನೆಂದು ನಂಬಲಾಗಿದೆ. ಹಲವು ಸಾರಿ ಅದು ಹೇಳಲ್ಪಟ್ಟಿದೆ; ಹಲವು ಸಾರಿ ಹೇಳಲ್ಪಡಲಿಲ್ಲ. ಸುವಾರ್ತೆ ಬರಹಗಾರರು ಯಾವಾಗಲಾದರು ಇದನ್ನು ಅಥವ ಅದನ್ನು ಹೇಳಿದರೆಂದು ಸೂಚಿಸಿದಾಗ ಅವರು ಅದನ್ನು ಪರಿಶುದ್ಧಾತ್ಮ ಪ್ರೇರೇಪಣೆಯಿಂದ ಹೇಳಿದರೆಂದು ಅರ್ಥಮಾಡಿಕೊಳ್ಳಬೇಕು. [14]"ಅಪೊಕ್ರಿಫ" ಎಂದರೆ "ರಹಸ್ಯವಾದ" ಎಂದರ್ಥ. ಈ ದಿವಸಗಳಲ್ಲಿ ಬಳಕೆಯಲ್ಲಿರುವಂತೆ "ಪ್ರಶ್ನಿಸಲ್ಪಟ್ಟ ಬರಹಗಾರ ಅಥವ ಪ್ರಾಮಾಣಿಕೆಯುಳ್ಳ." [15]Merrill C. Tenney, *New Testament Survey* (Grand Rapids, Mich.: Wm. B. Eerdmans Publishing Co., 1961), 131. [16]John Phillips, *Exploring the Scriptures* (London: Victory Press, 1965), 189-90.

## ಸುವಾರ್ತಾ ಬರಹಗಾರರ ವಿಶೇಷವಾದ ಸಂಬಂಧ

ಸುವಾರ್ತೆ ಬರಹಗಾರರಿಗೆ ಪರಿಶುದ್ಧಾತ್ಮನು ಯಾವ ರೀತಿಯಲ್ಲಿ ಸಕಲ ಮಾಹಿತಿಗಳನ್ನು ನೀಡಿದನು ಎಂದು ಅರಿಯುವದೆ ಕಷ್ಟದ ಸಂಗತಿಯಾಗಿದೆ. ಆದರೆ ಅವರಲ್ಲಿನ ಹೊಂದಾಣಿಕೆಯ ಸಂಬಂಧ ಕುರಿತು ಪಂಡಿತರು, ಟೀಕಾಕಾರರು, ಆಶ್ಚರ್ಯ ಚಕಿತರಾಗಿದ್ದಾರೆ.

ಮತ್ತಾಯನು ಅಪೊಸ್ತಲನಾಗಿದ್ದರೂ, ಕ್ರಿಸ್ತನೊಂದಿಗೆ ನೇರವಾದ ಸಂಬಂಧವನ್ನು

ಹೊಂದಿದ್ದನು (ಮತ್ತಾಯ 9:9; 10:3; ಮಾರ್ಕ 2:14). ಆತನು ಬರೆದು ತಿಳಿಸಿರುವ ಸಂಗತಿಗಳಿಗೆ, ಅವನೇ ಸ್ವಂತ ಸಾಕ್ಷಿಯಾಗಿದ್ದನು.

ಮಾರ್ಕನು, ಪೇತ್ರನಿಂದ ಸಕಲ ಮಾಹಿತಿಯನ್ನು ಪಡೆದಿದ್ದನು,[1] ಯಾಕೆಂದರೆ ಅವರಿಬ್ಬರು ಜೊತೆ ಕೆಲಸದವರಾಗಿದ್ದರು (1 ಪೇತ್ರ 5:13). ಮಾರ್ಕನು ಪೌಲನೊಂದಿಗೆ ಸೇವೆ ಮಾಡಿದ್ದನು (ಅಪೊಸ್ತಲರ ಕೃತ್ಯಗಳು 13:5; ಕೊಲಸ್ಸೆ 4:10). ಆದರೆ, ಯೇಸುವಿನ ವ್ಯಯಕ್ತಿಕ ಸಂಬಂಧದಲ್ಲಿ ಮಿತಿ ಹೊಂದಿದ್ದನು.[2]

ಲೂಕನು ಒಬ್ಬ ಸಂಶೋಧಕನಾಗಿದ್ದನು ಎಂಬ ಸೂಚನೆಯಿದೆ (ಲೂಕ 1:1-4),[3] ಅವನು ಯೇಸುವನ್ನು ವ್ಯಯಕ್ತಿಕವಾಗಿ ಸಂದಿಸಿರಲಿಲ್ಲ, ಅವನು ಸಾಕ್ಷಿಗಳನ್ನು ಸಂದಿಸಿರಬಹುದು. ಅವನು ಪೌಲನ ಜೊತೆ ಕೆಲಸಗಾರನಾಗಿದ್ದ, ಸ್ನೇಹಿತನೂ ಆಗಿದ್ದನು (ಕೊಲಸ್ಸೆ 4:14; 2 ತಿಮೊಥೆ 4:11[4]). ಅಪೊಸ್ತಲನ ಯೇಸುವಿನ ವೈಯಕ್ತಿಕವಾದ ಅನುಭವಕ್ಕೆ ಲೂಕನು ಸಾಕ್ಷಿಯಾಗಿದ್ದನು (1 ಕೊರಿಂಥ 11:23). ಅವರ ಬಾಯಿಂದ ಹೋರಾಟ ಪ್ರೇರಿತವಾದ ಸುವಾರ್ತೆಗೆ ಸಾಕ್ಷಿಯಾಗಿದ್ದನು.[5] ಈ ಸುವಾರ್ತೆಗಳು ಬರೆಯುವ ಮುನ್ನ ಮೂವತ್ತು ವರ್ಷಗಳ ಕಾಲ, ಪ್ರೇರಿತರಾದವರು ಸುವಾರ್ತೆಗಳನ್ನು ಪ್ರಸಂಗಿಸಿದ್ದರು. ಯೇಸುವಿನ ಮೂಲ ಚರಿತ್ರೆಯನು ಸಭೆಗಳು ಅರಿತ್ತಿದ್ದವು.

ಯೋಹಾನ ಮತ್ತು ಮತ್ತಾಯ, ಯೋಹಾನ ಅಪೊಸ್ತಲರಾಗಿ, ಜೊತೆಯಾಗಿ ಸೇವೆ ಮಾಡಿದ್ದರು (ಮತ್ತಾಯ 10:2; ಯೋಹಾನ 13:23; 19:26; 20:2; ಲೂಕ 5:1-11). ಮಾರ್ಕ ಮತ್ತು ಲೂಕ ರೋಮಾಯದಲ್ಲಿ ಒಂದೇ ಸಮಯದಲ್ಲಿ ಜೀವಿಸಿದ್ದರು (ಕೊಲಸ್ಸೆ 4:10, 14). ಯಾಕೆಂದರೆ ಯೆರೂಸಲೇಮಿನ ಮಾರ್ಕನ ಮನೆಯಲ್ಲಿ ಸಭೆಯು ಕೂಡಿ ಬರುತ್ತಿತ್ತು (ಅಪೊಸ್ತಲರ ಕೃತ್ಯಗಳು 12:12). ಮಾರ್ಕನು, ಮತ್ತಾಯ, ಯೋಹಾನ, ಹಾಗೂ ಇತರೆ ಅಪೊಸ್ತಲರನ್ನು ಅರಿತ್ತಿದ್ದನು. ಲೂಕನು ಯೆರೂಸಲೇಮಿನಲ್ಲಿ ಸಮಯ ಕಳೆದಿದ್ದರಿಂದ (ಅಪೊಸ್ತಲರ ಕೃತ್ಯಗಳು 21:15; 27:1). ಇವರೆಲ್ಲರ ಪರಿಚಯ ಹೊಂದಿರಬಹುದು. ಯಾಕೆಂದರೆ ಅವರೆಲ್ಲರು ಯೆರೂಸಲೇಮನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು ಕಾರ್ಯ ನಿರ್ವಯಿಸುತ್ತಿದ್ದರು. ಆದ್ದರಿಂದ ಮತ್ತಾಯ, ಮಾರ್ಕ, ಮತ್ತು ಲೂಕ ಇವರ ಸುವಾರ್ತೆಯನ್ನು ಅರಿತ್ತಿದ್ದನು. ಇವನು ಹೆಚ್ಚಿನ ಅಂಶವನ್ನು ಹೊಂದಿ, ದಾಖಲು ಮಾಡಿದ್ದನು.

ಹೊಂದಾಣಿಕೆ, ಶೈಲಿ, ವೈಶಿಷ್ಯದಲ್ಲಿ ವ್ಯತ್ಯಾಸಗಳಿದ್ದರೂ, ವಾಕ್ಯ ಒಂದೇಯಾಗಿರುತ್ತದೆ. ಪ್ರತಿ ಬರಹಗಾರನು ಪ್ರಮುಖ ಸಂಬಂಧವನ್ನು ಹೊಂದಿದ್ದರು. ಯೇಸುವಿನ ಚರಿತ್ರೆಯನ್ನು ತಿಳಿಸುವದಕ್ಕಾಗಿ, ಪವಿತ್ರಾತ್ಮನಿಂದ ಪ್ರೇರಿತರಾಗಿದ್ದರು.

---

ಟಿಪ್ಪಣೆಗಳು

[1]ಮೊದಲಿನ (ದೈವ ಪ್ರೇರೇಪಿತವಲ್ಲದ) ಬರಹಗಾರರು ಸಭೆಯಲ್ಲಿ ಇದು ಇದ್ದಿರಬಹುದೆಂದು ಹೇಳಿ ಕೊಳ್ಳುತ್ತಾರೆ. "ಮಾರ್ಕನ ಪುಸ್ತಕ" ಪಾಠವನ್ನು ಈ ಪುಸ್ತಕದ ಮೊದಲನೆಯ ಭಾಗದಲ್ಲಿ ನೋಡಿ. [2]ಮಾರ್ಕ 14:51, 52ರಲ್ಲಿ ಪ್ರಸ್ತಾಪಿಸಲ್ಪಟ್ಟ ಯೌವನಸ್ಥನು ಮಾರ್ಕನೇ ಆಗಿರಬಹುದೆಂದು ಹಲವರು ನಂಬುತ್ತಾರೆ. [3]ಲೂಕನ ಪರಿಶೋಧನೆಯನ್ನು ಪರಿಶುದ್ಧಾತ್ಮನು ಬಹುಶಃ ಮಾರ್ಗದರ್ಶಿಯಾಗಿರಬಹುದು. ನಿಜವಾಗಿ, ಲೂಕನು ಪರಿಶೋಧನೆಯಿಂದ ಕಂಡುಕೊಂಡ ವಿಷಯಗಳನ್ನು ಉಪಯೋಗಿಸಲು ಆತನು ಮಾರ್ಗದರ್ಶಿಯಾಗಿರಬಹುದು. [4]ಅಪೊಸ್ತಲರ ಕೃತ್ಯಗಳ ವಾಕ್ಯಭಾಗದಲ್ಲಿ "ನಾವು" (ಅಪೊಸ್ತಲರ ಕೃತ್ಯಗಳು 16:10, ಉದಾಹರಣೆಯಾಗಿ) ಎಂಬುದು ಪೌಲನೊಂದಿಗೆ ಲೂಕನಿಗಿರುವ ಹತ್ತಿರ ಸಂಬಂಧವನ್ನು ಸೂಚಿಸುತ್ತದೆ. [5]ಪೌಲನು ಮತ್ತು ಇತರ ಅಪೊಸ್ತಲರು ತಮ್ಮ ಕೈಗಳನ್ನು ಜನರ ಮೇಲೆ ಇಟ್ಟು ಅವರಿಗೆ ಅದ್ಭುತ ವರಗಳನ್ನು ಕೊಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 8:17). ಇತರರೊಂದಿಗೆ ಜ್ಞಾನವನ್ನು ಹಂಚಿಕೊಳ್ಳುವಂತೆ ಅದ್ಭುತವಾದ ಜ್ಞಾನವರವು ಈ ವರಗಳಲ್ಲಿ ಒಂದಾಗಿದೆ (1 ಕೊರಿಂಥ 12:8).

## ಸುವಾರ್ತೆಗಳ ಪರಸ್ಪರ ಸಂಕ್ಷಿಪ್ತ ಹೋಲಿಕೆ

| **ಪುಸ್ತಕ** | **ಬರೆದ ಮೂಲ ಉದ್ದೇಶ** | **ಯೇಸುವನು ಪ್ರತಿನಿಧಿಸಿರುವ** | **ಈ ಪುಸ್ತಕದ ಮುಖ್ಯಾಂಶ** | **ಪ್ರಚಲಿತ ಕೋರಿಕೆ** | **ಅಂತಿಮ ಉದ್ದೇಶ** | |
|---|---|---|---|---|---|---|
| ಮತ್ತಾಯ | ಯೆಹೂದ್ಯರಿಗೆ | ಅರಸ | ಮೆಸ್ಸೀಯ<br>ಆತನ ಬೋಧನೆ<br>ಆತನ ರಾಜ್ಯ<br>ಆತನ ಅಧಿಕಾರ | ಸತ್ಯವೇದದ ವಿದ್ಯಾರ್ಥಿಗೆ | **ವಾಗ್ದಾನದ** ರಕ್ಷಕ | ಜನರನ್ನು ರಕ್ಷಕನ ಜ್ಞಾನಕ್ಕೆ ನಡೆಸುವದಕ್ಕೆ |
| ಮಾರ್ಕ | ರೋಮಾಯರಿಗೆ | ಸೇವಕ | ಆತನ ಕ್ರಿಯೆ<br>ಜನರ<br>ಸಹಾಯಕ್ಕಾಗಿ<br>ಅದ್ಭುತಗಳು | ವ್ಯಾಪಾರಸ್ಥರಿಗೆ | **ಶಕ್ತಿಯುತ** ರಕ್ಷಕ್ಷ | |
| ಲೂಕ | ಗ್ರೀಕರಿಗೆ | ಮನುಷ್ಯ ಕುಮಾರ | ಯೇಸುವಿನ<br>ಪೂರ್ಣ<br>ಮನುಷ್ಯತ್ವ | ಶಾಸ್ತ್ರಜ್ಞರಿಗೆ,<br>ಪಂಡಿತರಿಗೆ<br>ವಿಚಾರ ವಾದಿಗಳಿಗೆ<br>ಸತ್ಯ<br>ಹುಡುಕುವವರಿಗೆ | **ಪರಿಪೂರ್ಣ** ರಕ್ಷಕ್ಷ | |
| ಯೋಹಾನ | ವಿಶ್ವಾಸಿಗಳಿಗೆ | ದೇವ ಕಮಾರ | ಯೇಸುವಿನ *ದೈವತ್ವ* | ಸಕಲ ಜನರಿಗೆ | **ವ್ಯಯಕ್ತಿಕ** ರಕ್ಷಕ | |

| ಸುವಾರ್ತೆಗಳ ಸಾಮರಸ್ಯಕ್ಕೆ ಅನುಕೂಲವಾಗುವ ಟಿಪ್ಪಣಿ ಪಟ್ಟಿ | | | | |
|---|---|---|---|---|
| ಕ್ರಿಸ್ತನ ಜೀವನ ಚರಿತ್ರೆಯ ಮೂಲ ಮುಖ್ಯಾಂಶಗಳು | ಸೆನೋಪ್ಟಿಕ್ಸ್ | | | ಯೋಹಾನ |
| | ಮತ್ತಾಯ | ಮಾರ್ಕ | ಲೂಕ | |
| I. ಜನನ ಬಾಲ್ಯ ಕಾಲಮಾನ<br>A. ಹುಟ್ಟುವ ಮೊದಲು | | | | |
| B. ವಂಶಾವಳಿ, ಹುಟ್ಟು, ಮತ್ತು ಬಾಲ್ಯ | | | | |
| II. ಸಿದ್ಧತೆಯ ಕಾಲಮಾನ<br>A. ಬಾಲ್ಯವಸ್ಥೆ | | | | |
| B. ಸ್ನಾನಿಕನಾದ ಯೋಹಾನನ ಸೇವೆ | | | | |
| C. ದೀಕ್ಷಾಸ್ನಾನ ಹಾಗೂ ಶೋಧನೆ | | | | |
| III. ಅಗೋಚರ ಕಾಲಮಾನ<br>A. ಗಲಿಲಾಯದ ಸೇವೆ<br>B. ಯೂದಾಯದ ಸೇವೆ | | | | |

| | | | | |
|---|---|---|---|---|
| IV. ಗಲಿಲಾಯದ ಮಹಾ ಸೇವೆ ಕಾಲಮಾನ<br>A. ಐದು ವಿದದ ಸಮಯ | ಹೆಚ್ಚು 14 ಅಧ್ಯಾಯಗಳು | ಸ್ವಲ್ಪ ಕಡಿಮೆ 9 ಅಧ್ಯಾಯಗಳು | ಸ್ವಲ್ಪ ಕಡಿಮೆ 5 ಅಧ್ಯಾಯಗಳು | 1 ಅಧ್ಯಾಯಕ್ಕಿಂತ ಸ್ವಲ್ಪ ಹೆಚ್ಚಾಗಿದೆ |
| B. ಯೆರೂಸಲೇಮಿನ ಪ್ರವೇಶ | | | | |
| V. ಪಾಲಿಸ್ತೇನಿನ ಅಂತಿಮ ಸೇವೆ ಕಾಲಮಾನ<br>A. ನಂತರ ಯೂದಾಯದ ಸೇವೆ | | | | ಯೆರೂಸಲೇಮ |
| B. ಸೇವೆ | ? | ? | | ಗಮನ ಸೆಳೆ |
| C. ಯೆರೂಸಲೇಮಿನ ಪ್ರವೇಶ | | | | ಗಮನ ಸೆಳೆ |
| VI. ಕಡೇವಾರ ಕಾಲಮಾನ<br>ಶಿಲುಬೆಯ ಮರಣ | 7 ಅಧ್ಯಾಯಗಳು | 5 ಅಧ್ಯಾಯಗಳು | $4\frac{1}{2}$ ಅಧ್ಯಾಯಗಳು | 8 ಅಧ್ಯಾಯಗಳು |
| VII. ನಾಲ್ವತ್ತು ದಿವಸಗಳ ಕಾಲಮಾನ<br>ಪುನರುತ್ಥಾನ ದಿವಾರೋಹಣ | | | | |